ಯಶೋದಮ್ಮನಿಗೆ ಏನು ಮಾಡಬೇಕೆಂದು ತಿಳಿಯದ ಗೊಂದಲ. ಅಮ್ಮ ಮುನಿಸಿಕೊಂಡು ಹೊರಟುಹೋದರೆ ಮತ್ತೆಂದೂ ಈ ಮನೆಯಲ್ಲಿ ತೊಟ್ಟಿಲು ತೂಗುವುದಿಲ್ಲವೇನೋ ಎನ್ನುವ ಭಯ. ಧೈರ್ಯ ಮಾಡಿದರು ಯಶೋದಮ್ಮ. ತಮ್ಮ ವಿಷಯವನ್ನೆಲ್ಲಾ ಚಾಚೂತಪ್ಪದೆ ಹೇಳುವವರು ಅಸಾಮಾನ್ಯ ಶಕ್ತಿಯುಳ್ಳವರು ಎಂದು ನಂಬದಿದ್ದರೆ ನಷ್ಟ ತಮಗೇ. ಕೆಂಪನನ್ನು ಸರಪಳಿಯಿಂದ ಅಂಗಳದ ಕಲ್ಲುಕಂಬಕ್ಕೆ ಬಂಧಿಸಿದರು ಯಶೋದಮ್ಮ. ಏನೇ ಆಗಲಿ, ಪೂರಾ ನಂಬಿಕೊಂಡು ಅಪರಿಚಿತರನ್ನು ಮನೆಯೊಳಗೆ ಬಿಟ್ಟುಕೊಳ್ಳಬಾರದೆಂದು ಅಂತಃಪ್ರಜ್ಞೆ ಎಚ್ಚರಿಸುತ್ತಲೇ ಇತ್ತು. ಆದರೆ ಅದಕ್ಕಿಂತಾ ವರ್ಷಾನುಗಟ್ಟಲೆಯ ಹೆಬ್ಬಯಕೆಯ ಕೈ ಮೇಲಾಗಿತ್ತು.

ಮುಂಜಗುಲಿಯಲ್ಲಿ ಇಳಿಯಿತು ಅಮ್ಮನ ಸವಾರಿ. ಅರಿಶಿನ, ಕುಂಕುಮದ ಬಟ್ಟಲು ಹಿಡಿದು ಬಂದ ಯಶೋದಮ್ಮ ಅಮ್ಮನಿಗೆ ಮನಸೋಕ್ತ ಪೂಜೆ ಮಾಡಿದರು. ಮುಡಿಯ ಮೇಲೆ ಹೂವಿಟ್ಟರು. ಊದುಬತ್ತಿ ಸುತ್ತಿಸಿ, ಕರ್ಪೂರದಾರತಿ ಮಾಡಿ ಕೈ ಮುಗಿದರು. ಬುಟ್ಟಿಯೊಳಗಿನ ಕುಂಕುಮಪ್ರಸಾದವನ್ನು ಕುತ್ತಿಗೆಯ ಕುಳಿಗೆ ಪೂಸಿಕೊಂಡರು, ಅಷ್ಟೇ...

★★★

ಕಳೆದುಕೊಂಡಿದ್ದು ಸಣ್ಣ ಮೊತ್ತವಲ್ಲ. ಕೆ.ಜಿ.ಗಟ್ಟಲೆ ಚಿನ್ನ. ಲಕ್ಷಗಟ್ಟಲೆ ಹಣ. ಪ್ರಸಾದದ ಕುಂಕುಮ ಹಚ್ಚಿಕೊಂಡಿದ್ದಷ್ಟೇ ಗೊತ್ತು ಯಶೋದಮ್ಮನಿಗೆ. ಮುಂದೇನಾಯ್ತು ಎನ್ನುವ ಬಗ್ಗೆ ಅವರಿಗೆ ಪರಿಜ್ಞಾನವಿಲ್ಲ. ಮುಸ್ಸಂಜೆಯ ಹೊತ್ತಿಗೆ ಮಂಪರುಮಂಪರಾಗಿ ಎಚ್ಚರ ಬಂದಾಗ ಕೆಂಪ ಕುತ್ತಿಗೆಯ ಸರಪಳಿ ಜಗ್ಗಿಕೊಳ್ಳುತ್ತಾ ಬೊಬ್ಬಿರಿಯುತ್ತಿದ್ದ. ಹಾರುಹೊಡೆದಿತ್ತು ಉಣುಗೋಲು. ಸಂತೆ ಮಾಡಿಕೊಂಡು ವಾಪಸು ಬಂದಿದ್ದ ತನಿಯ ಇತ್ತಿನ ಧ್ಯಾಸ ಇಲ್ಲದೆ ಮೈಮರೆತು ಬಿದ್ದಿದ್ದ ಯಶೋದಮ್ಮನನ್ನು ನೋಡಿ ಎದೆಯೊಡೆದುಕೊಂಡು ಮೈಮೇಲಷ್ಟು ನೀರು ಚಿಮುಕಿಸಿದ್ದ. 'ಕೂ...' ಹಾಕಿ ಹೆಂಡತಿಯನ್ನು ಕರೆಸಿಕೊಂಡಿದ್ದ. ಇಬ್ಬರೂ ಸನಿಹದಲ್ಲಿ ನಿಂತು ಕರೆದೇ ಕರೆಯುತ್ತಿದ್ದರು. 'ಎಂತಾತು ಅಮ್ಮಾ? ಏಳಿನಿ ಅಮ್ಮಾ..."

ನಿಧಾನಕ್ಕೆ ಎದ್ದು ಕೂತ ಯಶೋದಮ್ಮನಿಗೆ ಇನ್ನೂ ಜೂಗರಿಕೆ. ನಡೆದದ್ದೇನೆಂದು ಅಸ್ಪಷ್ಟವಾಗಿ ನೆನಪಾಗುತ್ತಾ, "ಅಮ್ಮಾ... ತಾಯೇ..." ಎನ್ನುತ್ತ ಕೈ ಮುಗಿದಿದ್ದರು ಯಶೋದಮ್ಮ, ತಮ್ಮನ್ನು ಉದ್ಧರಿಸಲೆಂದು ಬಂದ ಮಾರಮ್ಮ ಇನ್ನೂ ಅಲ್ಲೇ ಸ್ಥಾಪನೆಯಾಗಿದ್ದಾಳೆಂಬ ಭ್ರಮೆಯಿಂದ.

"ಎಂತ ಅಮ್ಮಾ? ಎಂತಾಯ್ತು? ತಲೆ ತಿರುಗಿ ಬಿದ್ರ್ಯಾ? ಇಕಣೆ, ಸಮಾ ಎಚ್ರ ಮಾಡ್ಕಣಿ.." ತನಿಯ ಎಚ್ಚರಿಸುವ ಮಾತಾಡುತ್ತಿದ್ದರೆ ಅವನ ಹೆಂಡತಿ ಯಶೋದಮ್ಮನನ್ನು ಬಳಸಿ ಹಿಡಿದು ಗೋಡೆಗೊರಗಿಸಿ ಕೂರಿಸಿದ್ದಳು. 'ತಲೆತಿರುಕು ಬಂದಿದ್ದು' ಎಂದಷ್ಟೇ ಆ ಅಮಾಯಕರ ನಂಬುಗೆ. ವಾಸ್ತವ ಅರಿವಾಗಲು ಬಹಳ ಹೊತ್ತು ಬೇಕಾಗಲಿಲ್ಲ. ವೆಂಕಟೇಶ ಮನೆಗೆ ಬಂದವನು ತಪಾಸಣೆ ತೆಗೆದರೆ ಇಡೀ ಮನೆಯೆಂಬೋ ಮನೆ ಗುಡಿಸಿಟ್ಟು ಹೋದಂತಾಗಿತ್ತು. ನಗ, ನಗದು ಮಾತ್ರವಲ್ಲದೆ ಪಾರಿಜಾತನ ದುಬಾರಿ ಸೀರೆಗಳೂ ಮಾಯವಾಗಿದ್ದವು.

★★★

ಹೀಗಿದ್ದೊಂದು ಘಟನೆ ಆ ಹಳ್ಳಿ ಊರಲ್ಲಿ ನಡೆದು, ಬೆಲೆ ಬಾಳುವಂತಾದ್ದೆಲ್ಲಾ ದರೋಡೆಯಾಗಿರುವುದನ್ನು ಕಂಡು, ಊರ ಜನಕ್ಕೆ ದಿಗ್ಭ್ರಮೆ, ಭಯ. ನಾಳೆ ಬಾಗಿಲು ಒಡೆದು ದೋಚಿಕೊಂಡು ಹೋಗುವವರು ಬಂದರೂ ಆಶ್ಚರ್ಯವಿಲ್ಲ. ನಾಯಿ ಇದೆಯೆನ್ನುವ ಧೈರ್ಯ ಮೂರುಕಾಸಿನ ಪ್ರಯೋಜನಕ್ಕೆ ಬರಲಿಲ್ಲ. ಪೊಲೀಸ್ ಸ್ಟೇಷನ್ನಿಗೆ ಹೋಗಿ ಕಂಪ್ಲೇಂಟು ಕೊಟ್ಟು ಬಂದಿದ್ದ ವೆಂಕಟೇಶ. ಗುಡ್ಡ ಜರಿದು ನೆತ್ತಿಯ ಮೇಲೆ ಬಿದ್ದಂತಾಗಿತ್ತು ಅವನಿಗೆ. ಸುದ್ದಿ ತಿಳಿದ ಯಶೋದಮ್ಮನ ಅಣ್ಣ, ಅತ್ತಿಗೆ ಧಾವಿಸಿ ಬಂದಿದ್ದರು. ಪೊಲೀಸರು ಮನೆಗೆ ಬಂದು ವಿಚಾರಣೆ